**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6228\2014\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:25/01/2018

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ರಮೇಶ್, ಪಟ್ಟಣ ಪಂಚಾಯತ್ ಸದಸ್ಯರು, ವಾರ್ಡ್ ನಂ.1, ಶ್ರೀರಾಮ ಬಡಾವಣೆ, ಸರಗೂರು, ಹೆಚ್‌ಡಿ ಕೋಟೆ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ಹೆಚ್‌ಡಿ ಕೋಟೆ ತಾಲ್ಲೂಕ್ ಸರಗೂರು ಶ್ರೀರಾಮ ಬಡಾವಣೆ ವಾರ್ಡ್ ನಂ.1ರ ಪಟ್ಟಣ ಪಂಚಾಯತ್ ಸದಸ್ಯರಾದ ಶ್ರೀ.ರಮೇಶ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಹೆಚ್‌ಡಿ ಕೋಟೆ ತಾಲ್ಲೂಕ್ ಸರಗೂರು ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿಗಳಾಗಿದ್ದ 1) ಶ್ರೀ.ಕರಿಬಸವಯ್ಯ ಮತ್ತು 2) ಶ್ರೀ.ಶಿವಲಿಂಗ ಕೊಂಡಗೂಳಿ [ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಸರಗೂರು ಪಟ್ಟಣ ಪಂಚಾಯತ್ ಕಛೇರಿಯಲ್ಲಿ-

1) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲಾಗಿರುವ 22.75% ಮತ್ತು 7.25% ಅನುದಾನದಲ್ಲಿ ಸರ್ಕಾರದ ಕಾನೂನುಗಳನ್ನು ಗಾಳಿಗೆ ತೂರಿ, ಅವರಿಗೆ ಬೇಕಾದ ಸಂಸ್ಥೆಯಿಂದ ಖರೀದಿಸಿ ₹7.78 ಲಕ್ಷಗಳನ್ನು ವಂಚಿಸಿ ದ್ರೋಹ ಬಗೆದಿದ್ದಾರೆ;

2) ಈ ಯೋಜನೆಯಡಿ ಸೋಲಾರ್ ಬೀದಿ ದೀಪ ಖರೀದಿಸಿರುವ ಸಂಸ್ಥೆ ಶ್ರೀನಿಧಿ ಎಂಟರ್‌ಪ್ರೈಸಸ್, ಮೈಸೂರು ರವರ ಹೆಸರು ಸೋಲಾರ್ ಬೀದಿ ದೀಪ ಒದಗಿಸುವ DGS & D 2013-14ನೇ ಸಾಲಿನ ಪಟ್ಟಿಯಲ್ಲಿ ಇಲ್ಲವಾದ್ದರಿಂದ, ಎದುರುದಾರರು ನಕಲಿ ದಾಖಲೆ ಸೃಷ್ಟಿಸಿ ಖರೀದಿಸಿದ್ದಾರೆ;

3) ಪ್ರತಿ ಸೋಲಾರ್ ಬೀದಿ ದೀಪಕ್ಕೆ DGS & D ದರಕ್ಕಿಂತ ಸುಮಾರು ₹11,000/-ಗಳ ಹೆಚ್ಚಿಗೆ ಬಿಲ್ ಪಾವತಿಸಿದ್ದು, ಇದರಿಂದಾಗಿ ಸುಮಾರು ₹2 ಲಕ್ಷ ಹೆಚ್ಚಿಗೆ ಪಾವತಿಸಿದಂತಿದೆ;

4) ಶ್ರೀನಿಧಿ ಎಂಟರ್‌ಪ್ರೈಸಸ್, ಮೈಸೂರು ರವರು ಸರಬರಾಜು ಮಾಡಿರುವ ಸೋಲಾರ್ ಬೀದಿ ದೀಪಗಳು ತೀರಾ ಕಳಪೆಯಾಗಿವೆ;

5) ಸರಬರಾಜಾಗಿರುವ ಸೋಲಾರ್ ಬೀದಿ ದೀಪದ ಸೆಟ್‌ಗಳ ಮೇಲೆ ಯಾವುದೇ ಬ್ರ್ಯಾಂಡ್ ಹೆಸರಾಗಲೀ, ಮಾದರಿಯಾಗಲೀ ಇಲ್ಲ;

6) ಕಛೇರಿಯ ನಿಯಮ ಪಾಲಿಸದೇ ಶ್ರೀನಿಧಿ ಎಂಟರ್‌ಪ್ರೈಸಸ್, ಮೈಸೂರು ರವರು ನೀಡಿರುವ ದಾಖಲೆಗಳು, ಬಿಲ್‌ಗಳು ಹಾಗು ಕಾಮಗಾರಿ ಆದೇಶ ಪತ್ರಗಳು ಕೂಡ ಕಛೇರಿ ಟಪಾಲು ವಿಭಾಗದಲ್ಲಿ ನಮೂದಾಗಿಲ್ಲ;

7) 3ನೇ ಪಕ್ಷದ ತಪಾಸಣಾ ಸಂಸ್ಥೆಯಾದ ಕ್ಯಾಡ್ ಸ್ಟೇಷನ್, ಮೈಸೂರು ರವರು ಯಾವುದೇ ತಪಾಸಣೆ ಕೈಗೊಳ್ಳದೇ ವರದಿಯನ್ನು ನೀಡಿದ್ದಾರೆ;

8) ವಾರ್ಡ್ ಸಂಖ್ಯೆ.1 ಹಾಗೂ 7ರಲ್ಲಿ ಪರಿಶಿಷ್ಟ ಪಂಗಡದ ಜನರು ವಾಸಿಸುತ್ತಿದ್ದು, ಈ ಬೀದಿಗಳಲ್ಲಿ ಖರೀದಿಸಿದ ಸೋಲಾರ್ ಬೀದಿ ದೀಪಗಳನ್ನು ಅಳವಡಿಸಲು ಸದಸ್ಯರು ಹಾಗೂ ಪರಿಶಿಷ್ಟ ಪಂಗಡದ ಜನರು ಮನವಿ ಮಾಡಿದರೂ ಎಲ್ಲಾ ಬೀದಿ ದೀಪಗಳನ್ನು ವಾರ್ಡ್ ಸಂಖ್ಯೆ.9ಕ್ಕೆ ಸೀಮಿತಗೊಳಿಸಿದೆ;

9) ಸರಬರಾಜು ಮಾಡಿದ ಸಂಸ್ಥೆಯವರು 2 ವರ್ಷ ನಿರ್ವಹಣೆ ಮಾಡಬೇಕಿದ್ದು, ಈ ಬಗ್ಗೆ ಭದ್ರತಾ ಠೇವಣಿಯನ್ನು ಕೂಡ ಕಟಾಯಿಸಿಲ್ಲ;

10) ಸಾಮಗ್ರಿಗಳನ್ನು ನಿಯಮಾನುಸಾರ ರೀತಿಯಲ್ಲಿ ದಾಸ್ತಾನು ಹಾಗೂ ಸಂಸ್ಥೆಯಿಂದ ಒಪ್ಪಂದ ಪತ್ರ ಮಾಡಿಲ್ಲ ಎಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಕೇಂದ್ರ ಸರ್ಕಾರದಿಂದ ಅಂಗೀಕೃತ ಮಾರಾಟಗಾರರಿಂದಲೇ DGS & D ದರ ಪಟ್ಟಿಯಲ್ಲಿನ ದರದಂತೆ ಸೋಲಾರ್ ಬೀದಿ ದೀಪ ಒಂದಕ್ಕೆ ₹32,200/–, ಪಿವಿ ಮಾಡಲ್ ಸಿಸ್ಟಂಗೆ ₹6,300/– ಮತ್ತು ಅಳವಡಿಸುವ ಚಾರ್ಜ್ ₹2,500/–ರಂತೆ ಒಟ್ಟು ₹43,500/– ಒಟ್ಟು 18ಕ್ಕೆ ₹7.08 ಲಕ್ಷ ಬಿಲ್ಲನ್ನು ಪಟ್ಟಣ ಪಂಚಾಯತ್‌ನ ಸಾಮಾನ್ಯ ಸಭೆಯ ನಿರ್ಣಯ ಹಾಗೂ ಜಿಲ್ಲಾಧಿಕಾರಿಗಳ ಆಡಳಿತ ಅನುಮೋದನೆಯಂತೆ ಸಂದಾಯ ಮಾಡಿದೆ. ಶ್ರೀನಿಧಿ ಎಂಟರ್‌ಪ್ರೈಸಸ್, ಮೈಸೂರು ರವರು ಹೀಲಿಯಸ್ ಕ್ಲೀನ್ ಎನರ್ಜಿ ಪ್ರೈ. ಲಿ.,ನ ಅಧಿಕೃತ ಮಾರಾಟಗಾರರಾಗಿದ್ದು, ಅವರು ಸರಬರಾಜು ಮಾಡಿರುವ 18 ಸೋಲಾರ ಬೀದಿ ದೀಪಗಳು 3ನೇ ಪಕ್ಷದ ತಪಾಸಣಾ ಸಂಸ್ಥೆಯಾದ ಕ್ಯಾಡ್ ಸ್ಟೇಷನ್,

ಮೈಸೂರು ರವರಿಂದ ದಿ:10/01/14ರಂದು ದೃಢೀಕರಣ ವರದಿಯನ್ನು ಪಡೆಯಲಾಗಿದೆ. ಒಂದು ವರ್ಷದ ನಿರ್ವಹಣೆಗಾಗಿ ಶ್ರೀನಿಧಿ ಎಂಟರ್‌ಪ್ರೈಸಸ್ ರವರಿಂದ ಕರಾರು ಮಾಡಿಕೊಳ್ಳಲಾಗಿದೆ. ದೂರುದಾರರು ದೂರಿನಲ್ಲಿ ಮಾಡಿದ ಆಪಾದನೆಗಳು ಸಾರ ರಹಿತವಾಗಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುವ ಸಮಜಾಯಿಷಿಯು ಕಾನೂನುಬಾಹಿರವಾಗಿದ್ದು, ಅವರ ಮೇಲೆ ಸೂಕ್ತ ಕ್ರಮ ಕೈಗೊಂಡು ಪಟ್ಟಣ ಪಂಚಾಯತ್‌ಗೆ ನಷ್ಟವಾಗಿರುವ ಹಣವನ್ನು ವಸೂಲಿ ಮಾಡಲು ಕೋರಿದ್ದಾರೆ.

5. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಕೇಳಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು–5(ಪ್ರಭಾರ) [ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ] ರವರು ತಮ್ಮ ತನಿಖಾ ವರದಿಯಲ್ಲಿ –

1) ಶ್ರೀನಿಧಿ ಎಂಟರ್‌ಪ್ರೈಸಸ್, ಮೈಸೂರು ರವರಿಗೆ ದರಪಟ್ಟಿಯನ್ನು ನೀಡುವ ಮುಂಚಿತವಾಗಿ ಎದುರುದಾರರು ಕೊಟೇಷನ್ ಆಹ್ವಾನಿಸಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ ಮತ್ತು ಶ್ರೀನಿಧಿ ಎಂಟರ್‌ಪ್ರೈಸಸ್, ಮೈಸೂರು ರವರು ನೀಡಿರುವ ಪತ್ರವನ್ನು ಕಛೇರಿಯಲ್ಲಿ ನೋಂದಾಯಿಸಿರುವುದು ಕಂಡು ಬಂದಿಲ್ಲ. ಶ್ರೀನಿಧಿ ಎಂಟರ್‌ಪ್ರೈಸಸ್, ಮೈಸೂರು ರವರಿಗೆ ಎದುರುದಾರರು ದಿ:08/01/14ರಂದು ಎರಡು ಬಿಲ್ಲನ್ನು ಸಲ್ಲಿಸಿದ್ದು, ಬಿಲ್ ಸಂ:129ರ ಮೊತ್ತವು ₹3,46,040/– (8 ಸಂಖ್ಯೆ ದಾರಿದೀಪಗಳು) ಮತ್ತು ಬಿಲ್ ಸಂ.130ರ ಮೊತ್ತವು ₹4,32,550/–(10 ಸಂಖ್ಯೆ ದಾರಿದೀಪಗಳು) ಬಿಲ್ಲುಗಳನ್ನು ಪರಿಶೀಲಿಸಲಾಗಿ, ಅವುಗಳಲ್ಲಿ ಯಾವುದೇ ಸ್ಪೆಸಿಫಿಕೇಶನ್ ಅಥವಾ ಮಾದರಿ ನಮೂದಿಸಿಲ್ಲ. ಒಂದೇ ಸರಕಿಗೆ 2 ಬಾರಿ ಬಿಲ್ ಮಾಡಿರುವುದು ಕಂಡು ಬಂದಿದೆ;

2) ಟೆಂಡರ್ ಅಥವಾ ಕೊಟೇಷನ್ ಆಹ್ವಾನಿಸದೇ ಖರೀದಿಗಾಗಿ ಸಾಕಷ್ಟು ಪ್ರಚಾರ ಮಾಡದೇ, ಯಾವುದೇ ಒಂದು ಸಂಸ್ಥೆಯವರೇ ಖುದ್ದಾಗಿ ನೀಡಿದ ದರಪಟ್ಟಿ ಆಧಾರದ ಮೇಲೆ ಸರಬರಾಜು ಆದೇಶ ನೀಡಿರುವುದು ಕೆಟಿಪಿಪಿ ನಿಯಮಾವಳಿಗೆ ವಿರುದ್ಧವಾಗಿದೆ;

3) ಅಳವಡಿಸಿದ ಬೀದಿ ದೀಪಗಳ ಪರಿವೀಕ್ಷಣೆಯ ಸಮಯಕ್ಕೆ ವಾರ್ಡ್ ಸಂ.9ರಲ್ಲಿ ಅಳವಡಿಸಿದ 10 ಸೋಲಾರ ಬೀದಿ ದೀಪಗಳು ದುರಸ್ತಿಯಲ್ಲಿವೆ. ಗ್ರಾಮಸ್ಥರನ್ನು ಕೇಳಲಾಗಿ ಕಳೆದ ಸುಮಾರು 1 ವರ್ಷದಿಂದ ಅವು ಕಾರ್ಯನಿರ್ವಹಿಸುತ್ತಿಲ್ಲವೆಂದು ಹೇಳಿದ್ದಾರೆ. 1 ವರ್ಷಕ್ಕಿಂತ ಅಧಿಕಾವಧಿಯ ಪೂರ್ವದಲ್ಲಿಯೇ ಸೌರಶಕ್ತಿ ದಾರಿ ದೀಪಗಳು ಸ್ಥಗಿತಗೊಂಡಿದ್ದು, ಕೂಡಲೇ ಸರಬರಾಜುದಾರರಿಗೆ

ತಿಳಿಸಿ ನಿರ್ವಹಣೆ ಮಾಡುವಲ್ಲಿ ನಿಷ್ಕಾಳಜಿ ತೋರಿದ್ದಾರೆ. ಇದರಿಂದಾಗಿ, 18 ಸಂಖ್ಯೆ ದಾರಿ ದೀಪಗಳಿಗೆ ಪಾವತಿಸಿದ ಒಟ್ಟು ₹7,78,590/- ಪೂರ್ಣವಾಗಿ ವ್ಯರ್ಥವಾಗಿರುವುದು ಕಂಡು ಬಂದಿದೆ. ಎದುರುದಾರರು ಮಾತ್ರವಲ್ಲದೆ, ನಂತರದ ದಿನಗಳಲ್ಲಿ ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅಧಿಕಾರಿ (ದಿ:24/07/14 ರಿಂದ ಈವರೆಗೆ – ದಿ:19/06/15 ರಿಂದ 26/06/15 ಹೊರತುಪಡಿಸಿ) ಶ್ರೀ.ಶಿವಲಿಂಗ ಕೊಂಡಗೂಳಿ ರವರು ಕೂಡ ಇದಕ್ಕೆ ಕಾರಣರಾಗಿದ್ದಾರೆ;

4) ಹೆಕ್ಕಣಿಕೆಯಲ್ಲಿ 3 ದಾರಿದೀಪಗಳ ಬ್ಯಾಟರಿಗಳನ್ನು ಮತ್ತು ಸಿಎಫ್‌ಎಲ್ ಬಲ್ಬನ್ನು ಪರಿಶೀಲಿಸಲಾಗಿ, ಅವುಗಳು ಐಎಸ್‌ಐ ಮಾದರಿಯದ್ದಾಗಿಲ್ಲ. ಸೌರಶಕ್ತಿ ದಾರಿ ದೀಪಗಳ ಸ್ಪೆಸಿಫಿಕೇಶನ್ ನಿರ್ಧರಿಸಲು ಕೈಗೊಂಡ ಕ್ರಮದ ಬಗ್ಗೆ ಎದುರುದಾರರು ಯಾವುದೇ ಸಾಕ್ಷ್ಯಾಧಾರ ಒದಗಿಸಿಲ್ಲ;

5) 18 ಸಿಎಫ್‌ಎಲ್ ಸೌರಶಕ್ತಿ ದಾರಿ ದೀಪಗಳ ಖರೀದಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದಿಲ್ಲ;

6) ಕಾರ್ಯಾದೇಶದಲ್ಲಿ ವಿಧಿಸಿದ ಷರತ್ತಿನಂತೆ 2 ವರ್ಷದ ವಾರಂಟಿ ಮತ್ತು ಗ್ಯಾರಂಟಿಗಾಗಿ ಸರಬರಾಜುದಾರರಿಂದ ₹100/- ಬಾಂಡ್ ಪೇಪರ್ ಮೇಲೆ ಪ್ರಮಾಣ ಪತ್ರ ಪಡೆದಿಲ್ಲ ಎಂದು ಹೇಳಿದ್ದಾರೆ.

6. ತನಿಖಾಧಿಕಾರಿಗಳ ವರದಿಯ ಆಧಾರದ ಮೇಲೆ ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅಧಿಕಾರಿ (ದಿ:24/07/14 ರಿಂದ ಈವರೆಗೆ – ದಿ:19/06/15 ರಿಂದ 26/06/15 ಹೊರತುಪಡಿಸಿ) ಶ್ರೀ.ಶಿವಲಿಂಗ ಕೊಂಡಗೂಳಿ ರವರನ್ನು 2ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ವರದಿಗೆ ಎದುರುದಾರರುಗಳಿಂದ ಉತ್ತರವನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಉತ್ತರದಲ್ಲಿ –

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಇಲಾಖಾ ವಿಚಾರಣಾ ಆದೇಶ ಸಂ:ಪೌನಿ:ವಿಚಾರಣೆ:ಚ:ಜಿ:ಸಿಆರ್:35\13-14(3201) ದಿ:17/05/17 ರೀತ್ಯಾ ಶಿಸ್ತು ಪ್ರಾಧಿಕಾರವು ಸದರಿ ವಿಷಯದ ಬಗ್ಗೆ ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ, ತಮ್ಮ ಮೇಲೆ ಶಿಸ್ತು ವಿಚಾರಣೆ ನಡೆಸಿ ಇಲಾಖಾ ವಿಚಾರಣೆಯ ಸಂಬಂಧ ಕೆಸಿಎಸ್ (ಸಿಸಿಎ), 1957ರ ನಿಯಮ 8(iii)ರಂತೆ ಮುಂದಿನ 3 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ದಂಡನೆ ಹಾಗೂ ವಿಚಾರಣಾ ವರದಿಯಲ್ಲಿ ಪ್ರಸ್ತಾಪಿಸಿರುವಂತೆ ಹೆಚ್ಚುವರಿಯಾಗಿ ಪಾವತಿಸಿದ ₹1,99,386/-ನ್ನು ತಮ್ಮಿಂದ ವಸೂಲಿ ಮಾಡಿ, ಸಂಬಂಧಪಟ್ಟ ಖಾತೆಗೆ ಜಮಾ ಮಾಡಲು ಆದೇಶಿಸಿದ್ದಾರೆ. ತಾವು ದಾಖಲೆಗಳನ್ನು ಹಾಜರುಪಡಿಸಿದರೂ ಕೂಡ ವಿಚಾರಣಾಧಿಕಾರಿಗಳು ಆರೋಪಗಳು ಸಾಬೀತಾಗಿವೆಯೆಂದು ಹೇಳಿದ್ದು, ಶಿಸ್ತು ಪ್ರಾಧಿಕಾರವು ಮೇಲಿನಂತೆ ಶಿಕ್ಷೆ ವಿಧಿಸಿರುವುದರಿಂದ, ತಮ್ಮ ಮೇಲಿನ ಕ್ರಮವನ್ನು ಕೈಬಿಡಲು ಕೋರಿದ್ದಾರೆ.

7. ಎರಡನೇ (2ನೇ) ಎದುರುದಾರರು ತಮ್ಮ ಉತ್ತರದಲ್ಲಿ –

2014ರ ನಂತರ ಶ್ರೀ.ಸೀನನಾಯಕ ಮತ್ತು ಶ್ರೀ.ವಿಜಯಕುಮಾರ್ ರವರು ಸರಗೂರು ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ತದನಂತರದ ಅವಧಿಯಲ್ಲಿ ತಾವು ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ಹೇಳಿದ್ದಾರೆ. ದೂರು ನೀಡಿದ 2 ವರ್ಷಗಳ ನಂತರ ಸ್ಥಳ ತನಿಖೆ ಮಾಡಿದ್ದು, ಪಟ್ಟಣ ಪಂಚಾಯತ್‌ನಿಂದ ಸಂಪೂರ್ಣ ನಿರ್ವಹಣೆ ಮಾಡಿ, ದುರಸ್ತಿ ಮಾಡಿದ್ದಲ್ಲಿ ತನಿಖೆ ಸಮಯದಲ್ಲಿ ಯಾವುದೇ ಲೋಪದೋಷಗಳು ಕಂಡು ಬರುತ್ತಿರಲಿಲ್ಲ. ಸೌರಶಕ್ತಿ ದೀಪಗಳ ಖರೀದಿ ಕಡತದಲ್ಲಿ ಯಾರಿಂದ ನಿರ್ವಹಣೆ ಮಾಡಿಸಬೇಕೆಂಬ ಒಪ್ಪಂದ ಪತ್ರ ಕೂಡ ಇರದಿರುವುದರಿಂದ, ಒಂದು ವರ್ಷದೊಳಗೆ ದುರಸ್ತಿ ನಿರ್ವಹಣೆ ಮಾಡಿದ್ದಲ್ಲಿ, ಒಂದೇ ಕೆಲಸಕ್ಕೆ 2 ಬಾರಿ ಸಾರ್ವಜನಿಕ ಹಣ ಪಾವತಿಸದಂತಾಗುತ್ತದೆ. ಈ ವಿಚಾರದಲ್ಲಿ ಪೌರಾಡಳಿತ ಇಲಾಖೆಯಿಂದ ತನಿಖೆಯಾಗಿದ್ದು, ತನಿಖಾ ಹಂತದಲ್ಲಿರುವಾಗ ಪಟ್ಟಣ ಪಂಚಾಯತ್‌ನಿಂದ ಹಣ ಪಾವತಿಸಿ ನಿರ್ವಹಣೆ ಮಾಡಿದ್ದಲ್ಲಿ, ತನಿಖೆಗೆ ಅಡಚಣೆ ಉಂಟಾಗುತ್ತದೆ. ಪಟ್ಟಣ ಪಂಚಾಯತ್‌ನ ಹಿಂದಿನ ಮುಖ್ಯಾಧಿಕಾರಿ ಶ್ರೀ.ಕರಿಬಸವಯ್ಯ ರವರ ಅವ್ಯವಹಾರ ಸಾಬೀತಾಗಿದ್ದು, ಅವರಿಗೆ ₹1,99,386/– ದಂಡ ವಿಧಿಸಿದ್ದಲ್ಲದೇ, ಮುಂದಿನ 3 ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯಲು ಆದೇಶವಾಗಿದೆ. ಅವರಿಂದ ವಸೂಲು ಮಾಡಲಾಗುವ ಹಣದಿಂದ ಎಲ್ಲಾ ದುರಸ್ತಿ ಕ್ರಮ ವಹಿಸಬೇಕಾಗಿದ್ದು, ಆ ಮೊತ್ತದಿಂದ ಎಲ್ಲಾ ದುರಸ್ತಿ ಕಾರ್ಯವನ್ನು ಮಾಡಿಸಲಾಗುತ್ತದೆ, ಸಾರ್ವಜನಿಕ ಹಿತದೃಷ್ಟಿಯಿಂದ ತನಿಖೆಗೆ ಅಡೆತಡೆಯಾಗದಂತೆ ಬೀದಿ ದೀಪ ದುರಸ್ತಿ ಮಾಡದೇ ಇರುವ ಕಾರಣ ಹೊರತು ತಮ್ಮಿಂದ ಕರ್ತವ್ಯ ಲೋಪ ಆಗಿಲ್ಲವೆಂದು ಹೇಳಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಶ್ರೀನಿಧಿ ಎಂಟರ್‌ಪ್ರೈಸಸ್ ರವರು ಸರಬರಾಜು ಮಾಡಿದ 18 ಸೋಲಾರ್ ದೀಪಗಳಿಗೆ ವಾರಂಟಿ\ ಗ್ಯಾರಂಟಿ ಕಾರ್ಡ್ ಇದಿಲ್ಲವೆಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಪರಿಶೀಲನಾ ವರದಿಯಲ್ಲಿ ಹೇಳಿದ್ದಲ್ಲದೇ, ತನಿಖಾಧಿಕಾರಿಗಳು ಸಹ ತಮ್ಮ ತನಿಖಾ ವರದಿಯಲ್ಲಿ ಹೇಳಿದ್ದಾರೆ. ಮುಂದುವರೆದು, ಸದರಿ ಶ್ರೀನಿಧಿ ಎಂಟರ್‌ಪ್ರೈಸಸ್ ರವರಿಂದ ಭದ್ರತಾ ಠೇವಣಿಯನ್ನು ಸಹ ಪಡೆದಿಲ್ಲ. ಸರಬರಾಜು ಮಾಡಿರುವ ಸೋಲಾರ್ ದೀಪಗಳಿಗೆ ಸಂಬಂಧಿಸಿದಂತೆ ವಾರಂಟಿ\ ಗ್ಯಾರಂಟಿ ಪಡೆಯದಿದ್ದ ಕಾರಣ ಮತ್ತು ವಸ್ತುಗಳನ್ನು ಸರಬರಾಜು ಮಾಡಿದ ಸಂಸ್ಥೆಯಿಂದ ಭದ್ರತಾ ಠೇವಣಿಯನ್ನು ಜಮಾ ಮಾಡಿಸಿಕೊಳ್ಳದಿರುವ ಕಾರಣ, ದುರಸ್ತಿಯಾಗಿರುವ ಬೀದಿ ದೀಪಗಳ ನಿರ್ವಹಣೆಯ ಬಾಬ್ತು ಹಣವನ್ನು ಪಟ್ಟಣ ಪಂಚಾಯತ್‌ನ ಅನುದಾನದಿಂದ ಅಥವಾ ಕರ್ತವ್ಯ ಲೋಪ ಎಸಗಿದ 1ನೇ ಎದುರುದಾರರಿಂದ ವಸೂಲಿ ಮಾಡಲ್ಪಡುವ ಹಣದಿಂದ ಮಾಡಬೇಕಾಗುತ್ತದೆ. 1ನೇ ಎದುರುದಾರರ ವಿರುದ್ಧ ಈಗಾಗಲೇ ಇಲಾಖಾ ವಿಚಾರಣೆ ನಡೆದು, ಸಕ್ಷಮ ಪ್ರಾಧಿಕಾರವು ಶಿಕ್ಷೆ ವಿಧಿಸಿದ್ದು, ಹೆಚ್ಚುವರಿಯಾಗಿ ವ್ಯಯಿಸಲ್ಪಟ್ಟ ಹಣವನ್ನು ಅವರಿಂದ ವಸೂಲಿ ಮಾಡಲು ಆದೇಶಿಸಿದೆ. ಕಡತದಲ್ಲಿ ಕಂಡು ಬರುವಂತೆ 2ನೇ ಎದುರುದಾರರು ಸರಗೂರು ಪಟ್ಟಣ ಪಂಚಾಯತ್‌ನ ಮುಖ್ಯಾಧಿಕಾರಿಯ

ಪ್ರಭಾರವನ್ನು ದಿ:24/07/14ರಂದು ವಹಿಸಿಕೊಂಡಿದ್ದು, ಅಳವಡಿಸಲಾದ 18 ಸೋಲಾರ್ ಬೀದಿ ದೀಪಗಳ ಪೈಕಿ ಒಂದು ಸೋಲಾರ್ ದೀಪ (ವಾರ್ಡ್ ನಂ.8 ಜೈನ ಸಮುದಾಯ ಭವನದ ಬಳಿ ಅಳವಡಿಸಿದ) 1ನೇ ಎದುರುದಾರರು ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದುರಸ್ತಿಯಾಗಿದೆಯೆಂದು ದಿನಾಂಕ:16/06/14ರ ಪರಿಶೀಲನಾ ವರದಿಯಲ್ಲಿ ಕಂಡು ಬಂದಿದೆ. ಉಳಿದ 17 ಸೋಲಾರ್ ದೀಪಗಳು ಆ ಸಮಯ ಸುಸ್ಥಿತಿಯಲ್ಲಿದ್ದು, ತನಿಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡುವ ಸಂದರ್ಭದಲ್ಲಿ (ದಿ:27/02/17) 18 ಸೋಲಾರ್ ಬೀದಿ ದೀಪಗಳ ಪೈಕಿ 10 ಸೋಲಾರ್ ದೀಪಗಳು ದುರಸ್ತಿಯಲ್ಲಿದ್ದವು.

9. ಆದ್ದರಿಂದ, 1ನೇ ಎದುರುದಾರರಿಂದ ಭರಿಸಲಾದ ಹಣದಿಂದಲೇ, 10 ಸೋಲಾರ್ ದೀಪಗಳನ್ನು ದುರಸ್ತಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

25/1/18

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**

25/1